**ಓ.ಎಸ್. ನಂಃ 324/2022**

**ಡಿ.ಡಬ್ಲ್ಯೂಃ 1**

**ದಿನಾಂಕ 02.04.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಕೆ.ಬಿ.ಜಿ. ವಕೀಲರಿಂದಃ**

1. ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಈ ದಾವೆಯನ್ನು ಯಾರು ಹೂಡಿರುತ್ತಾರೆ ಮತ್ತು ಯಾವ ಪರಿಹಾರವನ್ನು ಕೇಳಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೇ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿಯು 2 ನೇ ವಾದಿಯ ಗಂಡನಾದ ಜನಾರ್ಧನ್ ರವರಿಗೆ ತಮ್ಮ ತಂದೆಯಾದ ನಾರಾಯಣಗೌಡರವರಿಂದ ಬಂದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಹಿಂದಿನಿಂದಲೂ ಇಂದಿನವರೆಗೂ 2 ನೇ ವಾದಿಯ ಗಂಡನಾದ ಜನಾರ್ಧನ್, ಅವರ ತಂದೆಯಾದ ನಾರಾಯಣಗೌಡ ಮತ್ತು 2 ನೇ ವಾದಿ ಹಾಗೂ ಅವರ ಮಕ್ಕಳೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

2. 1981-82 ರ ಸಾಲಿನವರೆಗೂ ದಾವಾ ಆಸ್ತಿಯ ಪಹಣಿಯು 2 ನೇ ವಾದಿಯ ಗಂಡನಾದ ಜನಾರ್ಧನ್ ರವರ ಹೆಸರಿನಲ್ಲಿಯೇ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಂತರದಲ್ಲಿ ದಾವಾ ಆಸ್ತಿಯ ಪೈಕಿ 10 ಗುಂಟೆ ಜಮೀನು ಕಾಮಾಕ್ಷಮ್ಮ ರವರ ಹೆಸರಿಗೆ ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

3. ದಾವಾ ಆಸ್ತಿಯನ್ನು ನಾನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಆದರೆ ನನ್ನ ಅಣ್ಣ ನೋಡಿರುತ್ತಾರೆ. ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ತಾಯಿಯ ಹೆಸರು ಚನ್ನಮ್ಮ ಎಂದರೆ ಸರಿ. ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ತಾಯಿಯ ಹೆಸರಿಗೆ ಸರ್ವೇ ನಂಬರ್ 104/2 ರಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ ಆದರೆ ನನ್ನ ಅಣ್ಣನಿಗೆ ಗೊತ್ತಿರಬಹುದು. ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ತಾಯಿಯಾದ ಚನ್ನಮ್ಮರವರ ಹೆಸರಿಗೆ ಸರ್ವೇ ನಂಬರ್ 104/2 ರಲ್ಲಿ 1 ಎಕರೆ 22 ಗುಂಟೆ

ಜಮೀನು ಇತ್ತು ಎಂದರೆ ಸರಿ. ಎಂ.ಆರ್.ಸಂಖ್ಯೆ 27/1981-82 ರಲ್ಲಿಯು ಸಹ ಚನ್ನಮ್ಮರವರ ಹೆಸರಿಗೆ ಸರ್ವೇ ನಂಬರ್ 104/2 ರಲ್ಲಿ 1 ಎಕರೆ 22 ಗುಂಟೆ ಜಮೀನು ನಮೂದಾಗಿತ್ತು ಎಂದರೆ ಸರಿ.

4. ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ತಾಯಿಯಾದ ಚನ್ನಮ್ಮರವರ ಹೆಸರಿಗೆ ಸರ್ವೇ ನಂಬರ್ 104/2 ರಲ್ಲಿ ಇದ್ದ 1 ಎಕರೆ 22 ಗುಂಟೆ ಜಮೀನು ಮಾತ್ರ ಪೌತಿ ಆಧಾರದ ಮೇರೆಗೆ ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ಹೆಸರಿಗೆ ಖಾತೆ ವರ್ಗಾವಣೆ ಆಗಬೇಕಿತ್ತು ಎಂದರೆ ಸರಿ. ನಿಪಿ.10 ರ ದಾಖಲೆಯನ್ನು ಸಾಕ್ಷಿಗೆ ತೋರಿಸಿ, ನಿಪಿ.10 ರಲ್ಲಿ 1 ಎಕರೆ 22 ಗುಂಟೆ ವಿಸ್ತೀರ್ಣವನ್ನು 1 ಎಕರೆ 32 ಗುಂಟೆ ಎಂದು ತಿದ್ದುಪಡಿ ಮಾಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ.

5. ನಿಪಿ.10 ರಲ್ಲಿ ತಪ್ಪಾಗಿ ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ಹೆಸರಿಗೆ ಖಾತೆ ಆಗಿದ್ದ 1 ಎಕರೆ 32 ಗುಂಟೆ ಜಮೀನು ನಂತರದಲ್ಲಿ ಅವರ ಮಕ್ಕಳ ಹೆಸರಿಗೂ ಸಹ ಮುಂದುವರೆದಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 104/2 ರಲ್ಲಿ ಇದ್ದ 1 ಎಕರೆ 22 ಗುಂಟೆ ಜಮೀನನ್ನು ಕಾಮಾಕ್ಷಮ್ಮ ಮತ್ತು ಗೋಪಾಲಕೃಷ್ಣರವರ ತಾಯಿಯಾದ ಚನ್ನಮ್ಮರವರು ವಸಂತಕುಮಾರ ಎನ್ನುವವರಿಗೆ ಬೋಗ್ಯ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಚನ್ನಮ್ಮರವರು ಬೋಗ್ಯ ಮಾಡಿದ್ದ ಸರ್ವೇ ನಂಬರ್ 104/2 ರ 1 ಎಕರೆ 22 ಗುಂಟೆ ಜಮೀನು ನಂತರದಲ್ಲಿ ಸದರಿ ವಸಂತಕುಮಾರ ರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

6. ಸರ್ವೇ ನಂಬರ್ 104/1 ರಲ್ಲಿ ನೀವು 18 ಗುಂಟೆ ಜಮೀನಿನ ಸ್ವಾಧೀನದಲ್ಲಿ ಹಾಗೂ ಸರ್ವೇ ನಂಬರ್ 104/2 ರಲ್ಲಿ ನೀವು 1 ಎಕರೆ 22 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಇನ್ನೂ ಹೆಚ್ಚುವರಿ 18 ಗುಂಟೆ ಜಮೀನು ಬರಬೇಕು ಎಂದು ನುಡಿದಿರುತ್ತಾರೆ. ನಾನು ಹೇಳುತ್ತಿರುವ ಸದರಿ ಹೆಚ್ಚುವರಿ 18 ಗುಂಟೆ ಜಮೀನಿನ ಪೈಕಿ 10 ಗುಂಟೆ ಜಮೀನನ್ನು ವಾದಿಯರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಹೇಳುತ್ತಿರುವ ಸದರಿ ಹೆಚ್ಚುವರಿ 18 ಗುಂಟೆ ಜಮೀನಿನ ಪೈಕಿ 10 ಗುಂಟೆ ಜಮೀನು ನನ್ನ ಸ್ವಾಧೀನದಲ್ಲಿಲ್ಲ ಎಂದರೆ ಸರಿ. ಕಾಮಾಕ್ಷಮ್ಮರವರ ಜೀವಿತಾವಧಿಯಲ್ಲಿಯು ಸಹ ಸದರಿ ಹೆಚ್ಚುವರಿ 18 ಗುಂಟೆ

ಜಮೀನಿನ ಪೈಕಿ 10 ಗುಂಟೆ ಜಮೀನನ್ನು ವಾದಿಯರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸುಮಾರು 30 ರಿಂದ 40 ವರ್ಷಗಳಿಂದಲೂ ಸಹ ಸದರಿ ಹೆಚ್ಚುವರಿ 18 ಗುಂಟೆ ಜಮೀನಿನ ಪೈಕಿ 10 ಗುಂಟೆ ಜಮೀನನ್ನು ವಾದಿಯರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ.

7. 2 ನೇ ವಾದಿಯ ಗಂಡನಾದ ಜನಾರ್ಧನ ರವರ ಹೆಸರಿನಲ್ಲಿದ್ದ ದಾವಾ ಆಸ್ತಿಯನ್ನು ಹಿಂದಿನಿಂದಲೂ ವಾದಿಯರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸರ್ವೇ ಮಾಡಿಸಿದಾಗ ಸದರಿ ವಿಷಯ ನನಗೆ ಗೊತ್ತಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ಕಾಮಾಕ್ಷಮ್ಮರವರ ಹೆಸರಿಗೆ ಸರ್ವೇ ನಂಬರ್ 104/2 ರಲ್ಲಿ ಕೇವಲ 1 ಎಕರೆ 22 ಗುಂಟೆ ಜಮೀನು ಮಾತ್ರ ಇದ್ದ ಕಾರಣ ನೀವು ಸರ್ವೇ ನಂಬರ್ 104/2 ರಲ್ಲಿ ಕೇವಲ 1 ಎಕರೆ 22 ಗುಂಟೆ ಜಮೀನನ್ನು ಮಾತ್ರ ಖರೀದಿಸಬೇಕಾಗಿತ್ತು ಹಾಗೂ ತಪ್ಪಿನಿಂದ ನೀವು ಸರ್ವೇ ನಂಬರ್ 104/2 ರಲ್ಲಿ 1 ಎಕರೆ 32 ಗುಂಟೆ ಜಮೀನನ್ನು ಖರೀದಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಆವಾಗ 10 ಲಕ್ಷ ರೂಪಾಯಿ ಕೊಟ್ಟು ಎರಡು ಕಾಲು ಎಕರೆ ಜಮೀನನ್ನು ಖರೀದಿಸಿತ್ತೇನೆ ಎಂದು ನುಡಿದಿರುತ್ತಾರೆ.

8. ನೀವು ಸರ್ವೇ ನಂಬರ್ 104/1 ರ 18 ಗುಂಟೆ ಜಮೀನು ಮತ್ತು ಸರ್ವೇ ನಂಬರ್ 104/2 ರ 1 ಎಕರೆ 22 ಗುಂಟೆ ಜಮೀನಿನ ಸ್ವಾಧೀನದಲ್ಲಿ ಮಾತ್ರ ಇದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಒಟ್ಟು ಎರಡು ಕಾಲು ಎಕರೆ ಜಮೀನನ್ನು ಖರೀದಿಸಿದ್ದು, 10 ಗುಂಟೆ ಜಮೀನಿನ ಸ್ವಾಧೀನದಲ್ಲಿ ವಾದಿಯರಿದ್ದಾರೆ ಎಂದು ನುಡಿದಿರುತ್ತಾರೆ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**